# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 732

**ಸದಸ್ಯರ ಹೆಸರು** : **ಶ್ರೀ ಎಂ.ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)**

**ಉತ್ತರಿಸುವ ದಿನಾಂಕ** : 22.07.2024

**ಉತ್ತರಿಸುವವರು** : **ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯದಲ್ಲಿರುವ ಪ್ರಾಣಿ ಸಂಗ್ರಹಾಲಯಗಳ ಸಂಖ್ಯೆ ಎಷ್ಟು? | ಕರ್ನಾಟಕ ಮೃಗಾಲಯ ಪ್ರಾಧಿಕಾರವು ರಾಜ್ಯ ಸರ್ಕಾರೀ ಸ್ವಾಮ್ಯದ ಸ್ವಾಯತ್ತ ಸಂಸ್ಥೆಯಾಗಿದ್ದು, ಕೆಳಕಂಡ ಮೃಗಾಲಯಗಳ ಆಡಳಿತಾತ್ಮಕ ನಿಯಂತ್ರಣವನ್ನು ಹೊಂದಿರುತ್ತದೆ:-<br>1. ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು<br>2. ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು<br>3. ಶ್ರೀ ಅಟಲ್ ಬಿಹಾರಿ ವಾಜಪೇಯಿ ಜಿûÆಯಲಾಜಿಕಲ್ ಪಾರ್ಕ್, ಕಮಲಾಪುರ, ವಿಜಯನಗರ.<br>4. ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ, ಕಲ್ಬುರ್ಗಿ.<br>5. ಇಂದಿರ ಪ್ರಿಯದರ್ಶಿನಿ ಪ್ರಾಣಿ ಸಂಗ್ರಹಾಲಯ, ದಾವಣಗೆರೆ<br>6. ಕಿತ್ತೂರು ರಾಣಿ ಚೆನ್ನಮ್ಮ ನಿಸರ್ಗಧಾಮದ ಕಿರು ಮೃಗಾಲಯ, ಭೂತರಾಮನಹಟ್ಟಿ, ಬೆಳಗಾವಿ<br>7. ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ, ಬಿಂಕದಕಟ್ಟಿ, ಗದಗ<br>8. ಹುಲಿ ಮತ್ತು ಸಿಂಹಧಾಮ, ತ್ಯಾವರೆಕೊಪ್ಪ, ಶಿವಮೊಗ್ಗ.<br>9. ಮಕ್ಕಳ ಉದ್ಯಾನವನ ಹಾಗೂ ಕಿರು ಮೃಗಾಲಯ, ಆಡುಮಲ್ಲೇಶ್ವರ, ಚಿತ್ರದುರ್ಗ. |
| (ಆ) | ರಾಜ್ಯದಲ್ಲಿ ಹೊಸ ಪ್ರಾಣಿ ಸಂಗ್ರಹಾಲಯಗಳನ್ನು ಆರಂಭಿಸುವುದಕ್ಕೆ ಸರ್ಕಾರವು ಯಾವುದಾದರೂ ಪ್ರಸ್ತಾವನೆಗಳನ್ನು ಸ್ವೀಕರಿಸಿದೆಯೇ? | ಹೊಸ ಪ್ರಾಣಿ ಸಂಗ್ರಹಾಲಯಗಳನ್ನು ಆರಂಭಿಸುವುದಕ್ಕೆ ಸರ್ಕಾರದಲ್ಲಿ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.<br><br>ಆದರೆ, ಕಲಬುರಗಿಯ ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯವನ್ನು ಕೇಂದ್ರೀಯ ಮೃಗಾಲಯ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದು, ಚಿತ್ತಾಪುರ ತಾ\|\| ಮಾಡಬೂಳ ಗ್ರಾಮದ ಸರ್ವೆ ನಂ. 48 ರಲ್ಲಿ 42.38 ಎಕರೆ ಜಮೀನಿನ್ನು ಮೃಗಾಲಯ ಸ್ಥಾಪಿಸುವ ಸಲುವಾಗಿ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸಿರುವುದರಿಂದ,s ಸದರಿ ಮೃಗಾಲಯವನ್ನು ಸ್ಥಳಾಂತರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| (ಇ) | ಹಾಗಿದ್ದಲ್ಲಿ, ಅದರ ವಿವರಗಳು ಮತ್ತು ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು? | ಉದ್ಭವಿಸುವುದಿಲ್ಲ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಈ) | ರಾಜ್ಯದಲ್ಲಿ ಪ್ರಾಣಿ ಸಂಗ್ರಹಾಲಯಗಳ ಕಾರ್ಯಕ್ಷಮತೆಯನ್ನು ಮೌಲ್ಯೀಕರಿಸಲು ಶ್ರೇಣಿಕರಣ ಪದ್ಧತಿಯನ್ನು ರೂಢಿಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರವು ಯಾವುದಾದರೂ ಪ್ರಸ್ತಾವನೆಯನ್ನು ಹೊಂದಿದೆಯೇ; ಹಾಗಿದ್ದಲ್ಲಿ ಅದರ ವಿವರಗಳೇನು; | ಕೇಂದ್ರೀಯ ಮೃಗಾಲಯ ಪ್ರಾಧಿಕಾರವು ಭಾರತದಲ್ಲಿನ ಮೃಗಾಲಯಗಳನ್ನು ನಿರ್ವಹಣೆ, ಸಂರಕ್ಷಣೆ, ಶಿಕ್ಷಣ ಮತ್ತು ಪ್ರಾಣಿ ಕಲ್ಯಾಣವನ್ನು ಸುಧಾರಿಸಲು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಮೌಲ್ಯಮಾಪನ ಮಾಡುತ್ತದೆ. Management Effectiveness Evaluation (MEE) ಎಂದು ಕರೆಯಲ್ಪಡುವ ಮೌಲ್ಯಮಾಪನ ಪ್ರಕ್ರಿಯೆಯು ನಿರ್ವಹಣೆ ಮತ್ತು ಪರಿಣಾಮಕಾರಿತ್ವದಂತಹ ನಿಯತಾಂಕಗಳನ್ನು ಆಧರಿಸಿದೆ. ಮುಂದುವರೆದು, ರಾಜ್ಯದಲ್ಲಿ ಪ್ರಾಣಿ ಸಂಗ್ರಹಾಲಯಗಳ ಕಾರ್ಯಕ್ಷಮತೆಯನ್ನು ಮೌಲ್ಯೀಕರಿಸಲು ಶ್ರೇಣಿಕರಣ ಪದ್ಧತಿಯನ್ನು ರೂಪಿಸಲು ರಾಜ್ಯ ಸಾರ್ಕಾರದ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| (ಉ) | ರಾಜ್ಯದಲ್ಲಿ ಹೊಸ ಪ್ರಾಣಿ ಸಂಗ್ರಹಾಲಯಗಳನ್ನು ಆರಂಭಿಸಲು ಅರಣ್ಯ ಇಲಾಖೆಯು ಮೀಸಲಿರಿಸಿದ ಅನುದಾನವೆಷ್ಟು? | ರಾಜ್ಯದಲ್ಲಿ ಹೊಸ ಪ್ರಾಣಿ ಸಂಗ್ರಹಾಲಯಗಳನ್ನು ಆರಂಭಿಸಲು ಅರಣ್ಯ ಇಲಾಖೆಯಿಂದ ಯಾವುದೇ ಅನುದಾನವನ್ನು ಮೀಸಲಿರಿಸಿರುವುದಿಲ್ಲ. |

**ಸಂಖ್ಯೆ: ಅಪಜೀ 71 ಎಫ್‌ಪಿಸಿ 2024**

Behandk

**(ಈಶ್ವರ ಬಿ.ಖಂಡ್ರೆ)**

ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು